## ಪ್ರ ದ ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ

## ಸಿ ಸಿ ನಂಃ 741/2020

ಚಾಸಾ8

ಪ್ರಾಸಾ7

ಸಾಕ್ಷಿಯ ಹೆಸರು : ಪ್ರಶಾಂತ್ ಡಿಸೋಜಾ
ತಂದೆ / ಗಂಡನ ಹೆಸರು : ಜರ್ಮಿ ಡಿಸೋಜಾ
ವಯಸ್ಸು : 39
ಉದ್ಯೋಗ : ಫೋಟೋಗ್ರಾಫರ್
ವಾಸ ಸ್ಥಳ : ಕುಶಾಲನಗರ

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 23.03.2026**
**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ನನಗೆ ಚಾಸಾ 9 ರವರು ಗೊತ್ತು . ಸಾಕ್ಷಿಗೆ ಕಲಂ 65 ಬಿ ಅಡಿಯಲ್ಲಿ ನೀಡಿದ ದೃಡೀಕರಣ ಪತ್ರವನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪತ್ರವನ್ನು ಈಗಾಗಲೆ ನಿಪಿ 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ 6ಬಿ ಎಂದು ಗುರುತಿಸಲಾಯಿತು. ದಿಃ 28.07.2020 ರಂದು ಕುಶಾಲನಗರ ಗ್ರಾಮಾಂತರ ಪೋಲಿಸ್ ಠಾಣೆಯ ಪೋಲಿಸರಾದ ಚಾಸಾ 9 ರವರು ಅವರ ವಿಮೋ ಮೊಬೈಲನ ಮೆಮೊರಿ ಕಾರ್ಡನ್ನು ನನಗೆ ಕೊಟ್ಟು ಮೂರು ಫೋಟೋಗಳನ್ನು ಪ್ರಿಂಟ್ ತೆಗೆಯಲು ಹೇಳಿದರು. ನಾನು ಸದರಿ ಫೋಟೋವನ್ನು ಹೆಚ್ ಸಿ ಎಲ್ ಸಿಸ್ಟಂಗೆ ಹಾಕಿ ಎಪ್ಸಾನ್ ಪ್ರಿಂಟರನಿಂದ ಮೂರು ಫೋಟೋಗಳನ್ನು ತೆಗೆದಿರುತ್ತೇನೆ. ಸಾಕ್ಷಿಗೆ ಸದರಿ ಪ್ರಿಂಟರನಿಂದ ತೆಗೆದ ಒಂದು ಫೋಟೋವನ್ನು ತೋರಿಸಲಾಗಿ ಸಾಕ್ಷಿಯು ಸದರಿ ಫೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ನಿಪಿ 3 ಎಂದು ಗುರುತಿಸಲಾಗಿರುತ್ತದೆ .

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಡಿ ಡಿ ಸಿ ವಕೀಲರಿಂದ**

ಕುಶಾಲಗನರ ಗ್ರಾಮಾಂತರ ಪೋಲಿಸ್ ಠಾಣೆಗೆ ಸಂಬಂದಸಿದ ಎಲ್ಲಾ ಪ್ರಕರಣದಲ್ಲಿ ನಾನೆ ಫೋಟೋಗ್ರಾಫಿ ಮಾಡುತ್ತೇನೆ ಎಂದರೆ ಸಾಕ್ಷಿಯು ಕೆಲವೊಂದರಲ್ಲಿ ಮಾಡುತ್ತೇನೆ ಎಂದು ನುಡಿದರು. ದಿಃ 28.07.2020 ರಂದು ನಿಪಿ 6 ನ್ನು ಪೋಲಿಸರು ಬೆರಳಚ್ಚು ಮಾಡಿದ್ದು ಅದಕ್ಕೆ ನಾನು ಸಹಿ ಹಾಕಿರುತ್ತೇನೆ . ನಿಪಿ 6 ಕ್ಕೆ ನಾನು ಠಾಣೆಗೆ ಹೋಗಿ ಸಹಿ ಹಾಕಿರುತ್ತೇನೆ . ಯಾವ ದಿನಾಂಕದಂದು ನಿಪಿ 6 ಕ್ಕೆ ಸಹಿ ಹಾಕಿರುತ್ತೇನೆ ಎಂದು ನನಗೆ ನೆನಪಿಲ್ಲ. ನಾನು ಚಾಸಾ 9 ರವರಿಗೆ ಫೋಟೋ ವಾಶ್ ಮಾಡಿ ಕೊಟ್ಟ ನಂತರ 3 ದಿನಗಳ ಆದ ಮೇಲೆ ನಿಪಿ 6 ಕ್ಕೆ ಹೋಗಿ ಸಹಿ ಹಾಕಿರುತ್ತೇನೆ . ದಿಃ 28.07.2020 ರಂದು ಚಾಸಾ 9 ರವರಿಗೆ ಸಂಬಂದಪಟ್ಟ ಫೋನನ್ನು ನಾನು ನೋಡಿರುತ್ತೇನೆ . ವಿಮೋ ಕಂಪನಿಗೆ ಸೇರಿದ್ದ ಯಾವ ಮಾಡೆಲ್ ಎಂದು ನಾನು ನೋಡಿರುವುದಿಲ್ಲ ಸಾಕ್ಷಿಯು ಮುಂದುವರೆದು ವಿಮೊ ಮೊಬೈಲನ್ನು ನೋಡಿರುತ್ತೇನೆ ಎಂದು ನುಡಿದರು. ನಾನು 3 ದಿನಗಳು ಕಳೆದ ನಂತರ ಠಾಣೆಗೆ ಹೋಗಿ ಸಹಿ ಹಾಕಿದ್ದು ಆ ಸಮಯದಲ್ಲಿ ವಿಮೋ ಕಂಪನಿಗೆ ಸೇರಿದ ಮೊಬೈಲ ಯಾವ ಮಾಡೆಲ್ ಎಂದು ಬೆರದಿದ್ದನ್ನು ನಾನು ನೋಡಿರುವುದಿಲ್ಲ. ನಿಪಿ 6 ರಲ್ಲಿ ಬರೆದಿದ್ದ ಕ್ರೈಂ ನಂಬರ ಬಗ್ಗೆ ನಾನು ನೋಡಿರುತ್ತೇನೆ .

ನಾನು ಠಾಣೆಗೆ ಹೋಗಿ ನಿಪಿ 6 ಕ್ಕೆ ಮಾತ್ರ ಸಹಿ ಹಾಕಿರುತ್ತೇನೆ . ಬೇರೆ ಯಾವುದೆ ವರದಿಗಳಿಗೂ ಸಹಿ ಹಾಕಿರುವುದಿಲ್ಲ. ನಾನು ತೊಳೆದು ಕೊಟ್ಟ ಫೋಟೋಗಳು ಮೆಮೊರಿ ಕಾರ್ಡ್ ನಲ್ಲಿ ದ್ದು ಅದು ಎಕ್ಸಟರ್ನಲ್ ಮೆಮೋರಿಯಲ್ಲಿ ಇರುತ್ತದೆ . ನಾನು ನೋಡಿದಂತಹ

ಮೆಮೊರಿ ಕಾರ್ಡ್ ಯಾವ ಕಂಪನಿಗೆ ಎಂದು ನಾನು ನೋಡಿಕೊಂಡಿರುವುದಿಲ್ಲ. ಎಷ್ಟು ಜಿ ಬಿ ಕಪ್ಯಾಸಿಟಿ ಎಂದು ನಾನು ನೋಡಿರುವುದಿಲ್ಲ. ಸದರಿ ಮೆಮೊರಿ ಕಾರ್ಡನಲ್ಲಿ 3 ಫೋಟೋ ಇತ್ತು ಬೇರೆ ಯಾವುದೆ ಫೋಟೋಗಳು ಇರುವುದಿಲ್ಲ. ಅದಕ್ಕೆ ಯಾವುದದಾರು ಪ್ರತ್ಯೇಕ ಫೈಲ ನೇಮ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಕೊಟ್ಟಿರುವುದಿಲ್ಲ ಎಂದು ನುಡಿದರು. ಸದರಿ ಫೋಟೋಗಳು ಯಾವ ದಿನಾಂಕಂದು ತೆಗೆಯಲಾಗಿತ್ತು ಎಂದು ಫೋಟೋಗಳ ಮೇಲೆ ಇರಲಿಲ್ಲ ಎಂದು ನುಡಿದರು. ನಾನು ನೋಡಿದ 3 ಫೋಟೋಗಳು ಯಾವ ಸಮಯದಂದು ಮತ್ತು ಯಾವ ದಿನಾಂಕದಂದು ತೆಗೆಯಲಾಗಿತ್ತು ಎಂದು ನಾನು ನೋಡಿರುವುದಿಲ್ಲ.

ನಾನು ಫೋಟೋಗ್ರಾಫಿಯನ್ನು ಹಾಗೆ ಕಲಿತಿರುತ್ತೇನೆ ಯಾವುದೆ ವಿಶೇಷ ಜ್ಞಾನ ಪಡೆದಿರುವುದಿಲ್ಲ. ನಾನು ಚಸಾ 9 ರವರಿಗೆ ಸಂಬಂದಪಟ್ಟ ಫೋಟೋಗಳನ್ನು ಯಾವ ಕಂಪನಿಗೆ ಸೇರಿದ ಕಾರ್ಡ್ ರೀಡರ್ ನಲ್ಲಿ ರೀಡ್ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಕಾರ್ಡ್ ರೀಡರ್ನ ನಿಂದ ಕಂಪ್ಯೂಟರಗೆ ಫೋಟೋಗಳನ್ನು ಟ್ರಾನ್ಸಫರ್ ಮಾಡಬೇಕಾದರೆ ಟೇಟಾ ಕೇಬಲನ ಅಗತ್ಯ ಇದೆ ಎಂದರೆ ಸರಿ . ನಾನು ಹೇಳಿದ 3 ಫೋಟೋಗಳು ಈ ನ್ಯಾಯಾಲಯದ ಮುಂದೆ ಇರುವುದಿಲ್ಲ ಎಂದರೆ ಸಾಕ್ಷಿಯು ಒಂದು ಫೋಟೋ ಮಾತ್ರ ಇರುತ್ತದೆ ಎಂದು ನುಡಿದರು. ನನ್ನ ಸ್ಟೂಡಿಯೋದಲ್ಲಿ ಇರುವಂತಹ ಎಪ್ಸನ್ ಪ್ರಿಂಟರನ ಕೋಡ್ ಯಾವುದು ಎಂದು ನನಗೆ ಗೊತ್ತಿಲ್ಲ. ನಾನು ಪ್ರಿಂಟರ್ ಹಾಕಿ ಕೊಟ್ಟ ಫೋಟೋಗಳಿಗೇ ಹಣವನ್ನು ಪಡೆದುಕೊಂಡಿರುತ್ತೇನೆ. ಅದಕ್ಕೆ ಯಾವುದೆ ತರಹದ ಬಿಲ್ ನ್ನು ನೀಡಿರುವುದಿಲ್ಲ. ದಿಃ 28.07.2020 ರಂದು ಯಾವುದೆ ಒಂದು ಚಿಪ್ ನಿಂದ 3 ಫೋಟೋಗಳನ್ನು ವಾಶ್ ಮಾಡಿ ಚಾಸಾ 9 ರವರಿಗೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣದಿಂದಾಗಿ ಅದೆ ದಿನ ಯಾವುದೆ

ದೃಡೀಕರಣ ಪತ್ರವನ್ನು ಜೆನರೇಟ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೆ ಫೋಟೋವನ್ನು ವಾಶ್ ಮಾಡದ ಕಾರಣ ನಾನು ಯಾವುದೆ ಹಣವನ್ನು ಪಡೆದಿರುವುದಿಲ್ಲ ಆದರಿಂದ ಯಾವುದೆ ಬಿಲ್ ನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಡೇಟ ಕೇಬಲ್ ಬಳಸಿ ಕಾರ್ಡ್ ರೀಡರ್ ನಿಂದ ಫೋಟೋವನ್ನು ರೀಡ್ ಮಾಡಿರುವ ಬಗ್ಗೆ ನಿಪಿ 6 ರಲ್ಲಿ ಉಲ್ಲೇಖ ಇರುವ ಬಗ್ಗೆ ನಾನು ನೋಡಿರುವುದಿಲ್ಲ.

ಚಾಸಾ 9 ರವರ ಬಳಿ ಎಷ್ಟು ಮೊಬೈಲ್ ಫೋನ್ ಇತ್ತು ಎಂದು ನನಗೆ ಮಾಹಿತಿ ಇರುವುದಿಲ್ಲ. ನಾನು ಕುಶಾಲನಗರ ಗ್ರಾಮಾಂತರ ಪೋಲಿಸ್ ಠಾಣೆಗೆ ಸಂಬಂದಿಸಿಂದ ಫೋಟೋಗಳನ್ನು ತೆಗೆದು ಕೊಡುವ ಕಾರಣ ಅವರ ಮಾತು ಕೇಳಿ ನಿಪಿ 6 ಕ್ಕೆ ನಾನು ಸಹಿ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸರು ಸೃಷ್ಟಿಸಿದಂತಹ ಸುಳ್ಳು ದಾಖಲಾತಿಗೆ ಸಹಿ ಮಾಡಿಕೊಟ್ಟು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ.